ಸಿ.ಸಿ ನಂಬ್ರ: 934/2023
ಪಿ.ಡಬ್ಲ್ಯೂ : 1

ದಿನಾಂಕ: 03-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ ಡಿ ಎಸ್ ವಕೀಲರಿಂದ

1. ನನ್ನದು ಪ್ಯಾನ್ಸಿ ಅಂಗಡಿ ಇರುತ್ತದೆ ಹಾಗೂ ನಾನು ಹಾಡುಗಾರನಿರುತ್ತೇನೆ. ಆರೋಪಿತ ನಮ್ಮ ಮನೆಯ ಹತ್ತಿರ ಇದ್ದು, ನನ್ನ ಹೆಂಡತಿಗೆ ಪರಿಚಯ ಇರುತ್ತಾಳೆ. ನನ್ನ ಹೆಂಡತಿಯ ಹೆಸರು ವಿನುತಾ. ಅವರಿಂದ 15 ವರ್ಷದಿಂದ ಆತ ಪರಿಚಯ ಇರುತ್ತಾಳೆ. ಆರೋಪಿತ ಗರಂ ಮಸಾಲೆಯನ್ನು ಲೈನ್ ಸೇಲ್ ಮಾಡುತ್ತಾಳೆ. ನನ್ನದು ಹಾಗೂ ಆರೋಪಿತನದ್ದು ತುಂಬಾ ವರ್ಷದಿಂದ ವ್ಯವಹಾರ ಇರುತ್ತದೆ. ನನಗೆ ಆರೋಪಿತ ಪರಿಚಯ ಆಗಿದ್ದು ನನ್ನ ಹೆಂಡತಿಯ ಮುಖಾಂತರ. ಇದಕ್ಕೂ ಪೂರ್ವದಲ್ಲಿ ಆಕೆ ನನ್ನ ಬಳಿ ಹಣ ತೆಗೆದುಕೊಂಡಿರುವುದಿಲ್ಲ, ಚಿನ್ನವನ್ನು ಬ್ಯಾಂಕಿನಲ್ಲಿ ಇಟ್ಟಿರುತ್ತೇನೆ ಎಂದು ಹೇಳಿ ನನ್ನ ಕಡೆಯಿಂದ ಹಣ ಪಡೆದುಕೊಂಡಿರುತ್ತಾರೆ.

2. ನಾನು ದುಡ್ಡು ಕೊಟ್ಟ 3 ತಿಂಗಳ ಹಿಂದೆ ಆಕೆ ನನ್ನನ್ನು ಹಣ ಕೇಳಿರುತ್ತಾಳೆ. ಅವರು 3,80,000/- ಬೇಕು ಅಂತ ಕೇಳಿರುತ್ತಾರೆ. ನಾನು ದಿನಾಂಕ 10-01-2021 ರಲ್ಲಿ ಹಣ ಕೊಟ್ಟಿರುತ್ತೇನೆ. ಅವರಿಗೆ ಲೋನು ಇದ್ದ ಬಗ್ಗೆ ನಾನು ಬ್ಯಾಂಕಿನಲ್ಲಿ ವಿಚಾರಿಸಿರುವುದಿಲ್ಲ. ಅವರು ನನ್ನ ಹೆಂಡತಿಯ ಬಳಿ 10 -20 ಸಾವಿರ ರೂ. ತೆಗೆದುಕೊಂಡು ಹೋಗುತ್ತಿದ್ದರು. ಈ ಹಣ ಕೊಡುವ 6- 7 ತಿಂಗಳ ಹಿಂದೆ ನನ್ನ ಹೆಂಡತಿಯಿಂದ 10-20 ಸಾವಿರ ರೂ. ತೆಗೆದುಕೊಂಡು ಹೋಗುತ್ತಿದ್ದರು. ತೆಗೆದುಕೊಂಡು ಹೋದ 10-20 ಸಾವಿರ ರೂ ಹಣವನ್ನು ಕೊಟ್ಟಿರುತ್ತಾರೆ. ಪ್ರಸ್ತುತ ಪ್ರಕರಣದ ಹಣ ತೆಗೆದುಕೊಂಡರು ಎನ್ನಲಾದ ಪೂರ್ವದಲ್ಲಿ ಆ ಹಣವನ್ನು ವಾಪಾಸು ಕೊಟ್ಟಿರುತ್ತಾರೆ.

3. ನಾನು 3 ಲಕ್ಷ ಹಣವನ್ನು ನಗದಾಗಿ ಕೊಟ್ಟಿರುತ್ತೇನೆ. ನಾನು ದಾಖಲೆ ಮಾಡಿಕೊಂಡಿರುವುದಿಲ್ಲ. ಅವರು ಒಂದು ಚೆಕ್ ನ್ನು ಕೊಟ್ಟಿರುತ್ತಾರೆ. ನಾನು ಹಣವನ್ನು ಕೊಡುವಾಗ ಚೆಕ್ ತೆಗೆದುಕೊಂಡಿರುತ್ತೇನೆ. ಅವರು ಒಂದು ವಾರ ಬಿಟ್ಟು ಹಣ ಕೊಡುತ್ತೇನೆ ಎಂದು ಹೇಳಿದರು. ನಾನು ಒಂದು ವಾರದ ನಂತರ ಹಣ ಕೇಳಿರುತ್ತೇನೆ. ಅವರು ಚೆಕ್ ಕೊಡುವ ಸಂದರ್ಭದಲ್ಲಿ ದಿನಾಂಕ ನಮೂದಿಸಿ, ಮೊತ್ತವನ್ನು ನಮೂದಿಸಿ

ಕೊಟ್ಟಿದ್ದರು. 3 ತಿಂಗಳ ನಂತರ ನಮೂದಿಸಿ ಕೊಟ್ಟಿದ್ದರು. ಚೆಕ್ ನನ್ನ ಅಂಗಡಿಯಲ್ಲಿ ಕೊಡುವಾಗಲೇ ಸಹಿಯನ್ನು ಮಾಡಿ ಕೊಟ್ಟಿರುತ್ತಾರೆ. ತಿಂಗಳಿಗೆ ನನಗೆ 4 ಲಕ್ಷ ಹಣ ವರಮಾನ ಇದೆ. ನನಗೆ ವರ್ಷಕ್ಕೆ 48 ಲಕ್ಷ ಆದಾಯ ಇರುತ್ತದೆ.

4. ನನ್ನ ಹೆಂಡತಿಯದ್ದು ಯುನಿಯನ್ ಬ್ಯಾಂಕ್ ನಲ್ಲಿ ಖಾತೆ ಇರುತ್ತದೆ. ನನ್ನದು ಸಿಂಡಿಕೇಟ್ ಬ್ಯಾಂಕ್ ಕುಂದಾಪುರದಲ್ಲಿ ಖಾತೆ ಇರುತ್ತದೆ. ನಾನು ಹಣವನ್ನು ಹಾಕುವುದು ಹಾಗೂ ತೆಗೆಯುವುದು ಸಿಂಡಿಕೇಟ್ ಬ್ಯಾಂಕ್ ನಲ್ಲಿ. ನಾನು ಅವರಿಗೆ ಚಿನ್ನವನ್ನು ಬ್ಯಾಂಕಿನಲ್ಲಿ ಅಡ ಇಟ್ಟು ಸಾಲ ಕೊಟ್ಟಿರುತ್ತೇನೆ. ನಾನು ಗೋಲ್ಡ್ ಸ್ಮಿತ್ ಹಾಗೂ ಮುತ್ತೂಟ್ ಫೈನಾನ್ಸ್ ನಲ್ಲಿ ಚಿನ್ನವನ್ನು ಅಡ ಇಟ್ಟಿರುತ್ತೇನೆ. ಮೊದಲೇ ಚಿನ್ನವನ್ನು ಅಡ ಇಟ್ಟಿದ್ದೆ. ಚೈನ್ ನ್ನು ಅಡ ಇಟ್ಟು 36 ಸಾವಿರ ರೂ. ಬಂದಿರುತ್ತದೆ. ಉಳಿದ ಹಣ ನನ್ನ ಬಳಿ ಇದ್ದದನ್ನು ಕೊಟ್ಟಿರುತ್ತೇನೆ. ಅಡ ಇಟ್ಟ ಚಿನ್ನವನ್ನು 1 ವರ್ಷಗಳ ನಂತರ ಬಿಡಿಸಿರುತ್ತೇನೆ. ಬ್ಯಾಂಕಿನಲ್ಲಿ ಚಿನ್ನ ಇಟ್ಟ ಬಗ್ಗೆ ದಾಖಲಾತಿ ಬ್ಯಾಂಕಿನಲ್ಲಿ ಇರುತ್ತದೆ. ಅದನ್ನು ಹಾಜರು ಪಡಿಸಬಹುದು.

5. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ನನ್ನ ಹೆಂಡತಿ ಆದಾಯ ತೆರಿಗೆ ಪಾವತಿದಾರನಿರುತ್ತಾಳೆ. 48 ಲಕ್ಷ ರೂ. ಆದಾಯ ಇದ್ದದ್ದು ನನ್ನ ಹೆಂಡತಿಗೆ. ನನ್ನದು ಸಹ ಇರುತ್ತದೆ. ನನಗೆ ತಿಂಗಳಿಗೆ 2 ಲಕ್ಷ ರೂ. ಆದಾಯ ಇರುತ್ತದೆ. ಅಂದಾಜು ವರ್ಷಕ್ಕೆ 24 ಲಕ್ಷ ಆದಾಯ ಇರುತ್ತದೆ. ನಾನು ಯಾವುದೇ ಆದಾಯ ತೆರಿಗೆ ಪಾವತಿಸುವುದಿಲ್ಲ. ಆರೋಪಿತಳು ನೀಡಿದೆ ಎನ್ನಲಾದ ಚೆಕ್ ಹೊರತು ಪಡಿಸಿ ನಾನು ಕೊಟ್ಟಿರುತ್ತೇನೆ ಎಂದು ಹೇಳುವ ಹಣಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿ ಇರುವುದಿಲ್ಲ. ಚೆಕ್ ನಲ್ಲಿ ಸಹಿ ಹಾಗೂ ಬರೆದಿರುವ ಮಾಹಿತಿಯ ಶಾಯಿಗಳು ಬೇರೆ ಬೇರೆ ಇರುತ್ತದೆ ಎಂದರೆ ಸಾಕ್ಷಿ ಸಹಿ ಅವರೇ ಹಾಕಿರುತ್ತಾರೆ ಪೆನ್ ನ್ನು ಬದಲಾಯಿಸಿರಬಹುದು ಎಂದು ನುಡಿಯುತ್ತಾರೆ.

6. ನಾನು ವಕೀಲರಿಗೆ ಯಾವ ಉದ್ದೇಶಕ್ಕೆ ಯಾವಾಗ ಹಾಗೂ ಚಿನ್ನವನ್ನು ಅಡ ಇಟ್ಟು ಸಾಲವನ್ನು ಕೊಟ್ಟ ಬಗ್ಗೆ ತಿಳಿಸಿರುತ್ತೇನೆ. ದಿನಾಂಕ 05-04-2021 ಕ್ಕೆ ಆರೋಪಿಗೆ ಕೊಟ್ಟ ನೋಟಿಸನ್ನು ನಾನು ಓದಿ ನೋಡಿರುವುದಿಲ್ಲ. ಅದೇ ರೀತಿ ದೂರಿನಲ್ಲಿ ಸಹ ಸದರಿ ವಿಚಾರವನ್ನು ಕಾಣಿಸಿರುವುದಿಲ್ಲ ಎಂದರೆ ಸರಿ. ನನ್ನ ಬಳಿ ಆರೋಪಿತಳು 3,80,000/- ಹಣ ಕೇಳಿದ್ದು ಇಲ್ಲ, ನಾನು ಚಿನ್ನ ಅಡ ಇಟ್ಟು ಹಣ ಕೊಟ್ಟಿದ್ದು ಇಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಬಳಿ ಸುಮಾರು ಸಲ 10 ರಿಂದ 20 ಸಾವಿರ ರೂ. ತೆಗೆದುಕೊಂಡ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಈ ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ ದುಡ್ಡನ್ನು ನಾನು ಕೊಟ್ಟದ್ದರಿಂದ ಆಕೆ ಚೆಕ್ ಕೊಟ್ಟಿರುತ್ತಾಳೆ ಎಂದು ನುಡಿಯುತ್ತಾರೆ. ನನಗೆ ಇಷ್ಟು

ವ್ಯವಹಾರ ಇದ್ದ ಬಗ್ಗೆ ಪಾಸ್ ಬುಕ್ ಹಾಜರು ಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ. ಆರೋಪಿಗೆ 3 ಲಕ್ಷ ಹಣ ಕೊಡುವ ಸಾಮರ್ಥ್ಯ ಇಲ್ಲ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ದೂರಿನಲ್ಲಿ, ಪ್ರಮಾಣ ಪತ್ರದಲ್ಲಿ ಹಾಗೂ ನೋಟಿಸಿನಲ್ಲಿ ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ